CCE-III-RR/PR/PF/NSR/NSPR(A)/111/7112

**A**

**ಆಗಸ್ಟ್ 2024 ರ ಪರೀಕ್ಷೆ-3**

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**CCE RR/PR/PF/ NSR/NSPR**

**ಸಂಕೇತ ಸಂಖ್ಯೆ : 62-K**

**Code No. : 62-K**

Question Paper Serial No.

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 03. 08. 2024 ] [ Date : 03. 08. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-15 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**03. 08. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **8 × 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳ ಸಂಖ್ಯೆ

(ಎ) ೧೦

(ಬಿ) ೦೯

(ಸಿ) ೦೭

(ಡಿ) ೦೬

2. ‘ಕತ್ತಲು’ – ಈ ಪದದ ವಿರುದ್ಧಾರ್ಥಕ ಪದ

(ಎ) ರಾತ್ರಿ

(ಬಿ) ತಮ

(ಸಿ) ಆಕಾಶ

(ಡಿ) ಬೆಳಕು

3. ಕೆಳಗಿನವುಗಳಲ್ಲಿ ತದ್ಭವ ರೂಪಕ್ಕೆ ಉದಾಹರಣೆಯಾಗಿರುವ ಪದ

(ಎ) ವರ್ಷ

(ಬಿ) ವರ್ಣ

(ಸಿ) ಕಬ್ಬ

(ಡಿ) ಸ್ವರ್ಗ

4. ಕೆಳಗಿನವುಗಳಲ್ಲಿ ಗುಣ ಸಂಧಿಗೆ ಉದಾಹರಣೆಯಾಗಿರುವ ಪದ

(ಎ) ಪೂರ್ವೋತ್ತರ

(ಬಿ) ದೀಪಾಲಂಕಾರ

(ಸಿ) ನೆತ್ತರೊಂದೆ

(ಡಿ) ಸದಭಿರುಚಿ

5. ಒಬ್ಬರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಭಾವಸೂಚಕ

(ಬಿ) ಆವರಣ

(ಸಿ) ವಿವರಣಾತ್ಮಕ

(ಡಿ) ಉದ್ಧರಣ

6. ಕೆಳಗಿನವುಗಳಲ್ಲಿ ಇಂಗ್ಲಿಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ

(ಎ) ಟಿಕೆಟ್

(ಬಿ) ರಸ್ತೆ

(ಸಿ) ಕಚೇರಿ

(ಡಿ) ಕಾಗದ

7. ಬೆಟ್ಟ ಹತ್ತುವಾಗ ಕಲ್ಲುಗುಡ್ಡವಿರುವುದರಿಂದ ದಳದಳ ಬೆವರು ಹರಿಯಿತು. – ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ

(ಎ) ಹರಿಯಿತು

(ಬಿ) ಕಲ್ಲುಗುಡ್ಡ

(ಸಿ) ದಳದಳ

(ಡಿ) ಬೆವರು

8. ಬುತ್ತಿಯನ್ನು ಕೊಟ್ಟ ಶಿಲ್ಪಿಯ ಮುಖ ಬಿಳಿಚಿತು. – ಈ ವಾಕ್ಯದಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ

(ಎ) ಶಿಲ್ಪಿಯ

(ಬಿ) ಬಿಳಿಚಿತು

(ಸಿ) ಬುತ್ತಿಯನ್ನು

(ಡಿ) ಮುಖ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

9. ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ......................... .

10. ಕುಲಕರ್ಣಿಯ ಕೈಯಲ್ಲಿ : ಪಿಸ್ತೂಲು :: ರಾಮ್‌ಸಿಂಗ್‌ನ ಕೈಯಲ್ಲಿ : ......................... .

11. ನುಚ್ಚುನೂರಾಗುವುದು : ಅಹಂಕಾರ :: ಮುದುಡಿ ಹೋಗುವುದು : ................... .

12. ಅಪ್ಪರಿಲ್ಲದೆ ಸೊಪ್ಪಾದೊ : ಈ ಭೂಮಿ :: ಸಪ್ಪೆದಂಟಾದೊ : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಸಂನ್ಯಾಸಿ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ ಯಾರು ?

14. ಬಯಲಿಗೆ ಎಲ್ಲಿಂದ ಹೊರ ಬರಬೇಕು ?

15. ಧರ್ಮಪದನು ಯಾವ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಲು ಬಂದನು ?

16. ಧರ್ಮಪದನ ತಂದೆಯ ಹೆಸರೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?

18. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ.

19. ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯಲ್ಲಿ ಅತಿ ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ ?

20. 'ವಿಶ್ವಾಮಿತ್ರ ಸೃಷ್ಟಿ' ಬೀಚಿಯವರ ಮೇಲೆ ಬೀರಿದ ಪ್ರಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

21. ಸಿ.ಪಿ.ಕೆ.ಯವರು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಯಾವುದನ್ನು ಕರೆದಿದ್ದಾರೆ ? ಏಕೆ ?

22. ದೇವರನ್ನು ಒಲಿಸಿಕೊಳ್ಳುವ ಪರಿಯನ್ನು ಬಸವಣ್ಣನವರು ಹೇಗೆ ತಿಳಿಸಿದ್ದಾರೆ ?

23. ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟ ಹೊಸ ಸೂತ್ರವನ್ನು ತಿಳಿಸಿ.

24. ಪುಲಿಗೆರೆ ಸೋಮನಾಥನು ಹೇಳಿರುವಂತೆ ಸಾಮರ್ಥ್ಯದಿಂದ ಮಾಡಬಹುದಾದ ಕಾರ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ದೊರಕಿದಾ ಗುರು ದೊರಕಿದಾ ಸದ್ಗುರು."

26. "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ವಿವರಿಸಿ.

28. ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಜಾತಿ, ಮತ, ಕುಲಗಳ ಗೋಡೆಯನ್ನು ಕೆಡಹಬೇಕಾದ ಹೊಸ ತಲೆಮಾರಿನ ಉತ್ಸಾಹವನ್ನು ಕವಿ ಚಿತ್ರಿಸಿರುವ ಬಗೆಯನ್ನು ಮೆಚ್ಚುವಂಥದ್ದು ಏಕೆ ? ವಿವರಿಸಿ.

30. ಮಳೆದೇವರಲ್ಲಿ ರೈತನು ಮಾಡಿಕೊಳ್ಳುವ ಪ್ರಾರ್ಥನೆಯನ್ನು ವಿವರಿಸಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ಗೊರೂರು ರಾಮಸ್ವಾಮಿ ಅಯ್ಯಂಗಾರ್

32. ಕೆ.ಎಸ್. ನಿಸಾರ್ ಅಹಮದ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

33. "ಶಕ್ತಿಗಿಂತ ಯುಕ್ತಿ ಮೇಲು."

**ಅಥವಾ**

"ಕೈ ಕೆಸರಾದರೆ ಬಾಯಿ ಮೊಸರು."

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

34. ಕೆಳದಿ ಚೆನ್ನಮ್ಮ ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು ? ವಿವರಿಸಿ.

**ಅಥವಾ**

ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದ ಬಗೆ ಹೇಗೆ ? ವಿವರಿಸಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

35. ಕಂಚುಗಾರನ ....................................................

.........................................................................

.........................................................................

............................................ ಪೂಜೆ ಮಾಡುವುದು

**ಅಥವಾ**

ನಾನು ಎಂಬುದ ..................................................

.........................................................................

.........................................................................

............................................ ಕಾರ್ಯಗಳೆಲ್ಲವು

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4**

36. ರಂಗನತಿಟ್ಟು ಪಕ್ಷಿಗಳಿಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ. ಕಾವೇರಿ ನದಿ ಈ ಪ್ರದೇಶದಲ್ಲಿ ಆಳವಾಗಿದ್ದು, ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ದಂಡೆಯುದ್ದಕ್ಕೂ ಹಸಿರು ಗಿಡಮರಗಳು, ಸುತ್ತಲೂ ಹೊಲಗದ್ದೆಗಳಿವೆ. ಇಲ್ಲಿ ಪಕ್ಷಿಗಳ ಆಹಾರವಾದ ಕೀಟ,

ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. ನದಿ ಆಳವಾಗಿರುವ ಕಾರಣ ಜನಸಂಚಾರವೂ ವಿರಳವಾಗಿರುವುದರಿಂದ ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆಯಿದೆ. ಆದುದರಿಂದ ಅವು ಸಾವಿರ ಸಾವಿರ ಸಂಖ್ಯೆಯಲ್ಲಿ ಇಲ್ಲಿ ನೆರೆಯುತ್ತವೆ. ಹಲವು ಹತ್ತು ಬಗೆಯ ಬಣ್ಣದ, ಆಕಾರದ, ಗಾತ್ರದ ಪಕ್ಷಿಗಳನ್ನು ಇಲ್ಲಿ ಕಾಣಬಹುದು. ಹಿಮ ಬಿಳುಪಿನ ಬಣ್ಣದ ತೆಳ್ಳನೆಯ ಕೊರಳಿನ ಬೆಳ್ಳಕ್ಕಿಗಳು, ಬಂಗಾರ ಬಣ್ಣದ, ನಯವಾದ ನೆತ್ತಿ ಮತ್ತು ಕೊರಳುಳ್ಳ ಬೂಸಹಕ್ಕಿಗಳು ಸಣ್ಣ ದೊಡ್ಡ ಗಾತ್ರದ ಬಗೆಬಗೆಯ ಕೊಕ್ಕರೆಗಳು ಮೊದಲಾದವು ಸಾವಿರಾರು ಸಂಖ್ಯೆಯಲ್ಲಿ ದಂಡೆಯುದ್ದಕ್ಕೂ ಸೇರುತ್ತವೆ. ಪ್ರಣಯ ಕಾಲದಲ್ಲಿ ಪಕ್ಷಿಗಳು ವರ್ಣಮಯವಾದ ತುಪ್ಪಳ, ಗರಿ, ಪುಕ್ಕ, ಕೊಕ್ಕುಗಳನ್ನು ಪಡೆಯುತ್ತವೆ. ಆಗ ಅವುಗಳ ಕೂಗು, ಧ್ವನಿ ಮಧುರವಾಗಿರುತ್ತವೆ.

***ಪ್ರಶ್ನೆಗಳು :***

ಎ) ರಂಗನತಿಟ್ಟು ಪ್ರದೇಶದಲ್ಲಿ ಹರಿಯುವ ನದಿ ಯಾವುದು ?

ಬಿ) ಈ ಪ್ರದೇಶದಲ್ಲಿ ಪಕ್ಷಿಗಳಿಗೆ ಆಹಾರವಾಗಿ ಏನೇನು ಹೇರಳವಾಗಿ ಸಿಗುತ್ತವೆ ?

ಸಿ) ರಂಗನತಿಟ್ಟು ಪ್ರದೇಶದಲ್ಲಿ ಪಕ್ಷಿಗಳು ಸಾವಿರಾರು ಸಂಖ್ಯೆಯಲ್ಲಿ ನೆರೆಯಲು ಕಾರಣವೇನು ?

ಡಿ) ಪ್ರಣಯ ಕಾಲದಲ್ಲಿ ಪಕ್ಷಿಗಳು ಏನನ್ನು ಪಡೆಯುತ್ತವೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 4 = 4**

37. ಶಾಲಾ ಗ್ರಂಥಾಲಯ

**ಅಥವಾ**

ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

38. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಂಜಲಿ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಮೈಸೂರಿನಲ್ಲಿ ವಾಸವಾಗಿರುವ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕಳಸದ ನಿವಾಸಿ 'ಮಿಥುನ್' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ, ಗ್ರಾಮಪಂಚಾಯತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

DO NOT WRITE ANYTHING HERE